# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 21 ಫ್ರಾ.ಸಾ. : 14**

ಸಾಕ್ಷಿಯ ಹೆಸರು : ಎ. ಮಣಿ

ತಂದೆಯ ಹೆಸರು : ಆರ್ಮೊಗಂ

ವಯಸ್ಸು : 44 ವರ್ಷ

ಕೆಲಸ : ಮೇಸ್ತ್ರಿ

ವಾಸ : ಗಾಂಧಿನಗರ, ಮಲ್ಲಾಪುರ, ಕಾರವಾರ

**ದಿನಾಂಕಃ 04-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ಮೃತ ವೇಲು ನನ್ನ ಸಂಬಂಧಿಕರು,ಅವರು ಕದ್ರಾದ ರಾಜೀವನಗರದಲ್ಲಿ ವಾಸವಾಗಿದ್ದರು ಹಾಗೂ ಅವರು ಟೈರ್ ಪಂಚರ್ ಅಂಗಡಿಯನ್ನು ಇಟ್ಟುಕೊಂಡಿದ್ದರು, ಅವರಿಗೆ ಸತ್ಯ ನಾರಾಯಣ ಮೂರ್ತಿ ಎಂಬ ಮಗ ಹಾಗೂ ಅಶ್ವಿನಿ ಎಂಬ ಮಗಳು ಇದ್ದರು. ಚಾಸಾ-22 ಜಾನಕಿ ಮೃತ ವೇಲು ರವರ ಹೆಂಡತಿ. ಆಕೆಗೆ ತಮಿಳು ಭಾಷೆ ಬರುತ್ತಿತ್ತು ಹಾಗೂ ಆಕೆಗೆ ಕನ್ನಡ ಭಾಷೆ ಸ್ವಲ್ಪ ಸ್ವಲ್ಪ ಬರುತ್ತಿತ್ತು. ನಾನು ಮಲ್ಲಾಪುರದ ಗಾಂಧಿನಗರದಲ್ಲಿ ವಾಸವಾಗಿರುತ್ತೇನೆ. ನನಗೆ ಕನ್ನಡ ಹಾಗೂ ತಮಿಳು ಭಾಷೆ ಬರುತ್ತದೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತು, ಆತನನ್ನು ಊರಿನಲ್ಲಿ ಎಲ್ಲರೂ ಗಿರಿ ಎಂದು ಕರೆಯುತ್ತಾರೆ ಹಾಗೂ ಆತನು ಕದ್ರಾದವನು.

2. ದಿಃ 15-02-2014 ರಂದು ನಾನು ಮನೆಯಲ್ಲಿರುವಾಗ ಬೆಳಿಗ್ಗೆ 07-30 ರ ಗಂಟೆಗೆ ನನ್ನ ಅಳಿಯ ಚಾಸಾ-10 ರವರು ನನಗೆ ಕರೆ ಮಾಡಿ, ವೇಲು ಹಾಗೂ ಆತನ ಮಕ್ಕಳನ್ನು ಕಡಿದು, ಕೊಲೆ ಮಾಡಿರುತ್ತಾರೆ ಹಾಗೂ ಆತನ ಹೆಂಡತಿಗೂ ಸಹ ಕಡಿದಿದ್ದು, ಆಕೆಯನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ ಎಂದು ತಿಳಿಸಿರುತ್ತಾರೆ. ಆ ಕೂಡಲೇ ನಾನು ರಾಜೀವನಗರದ ವೇಲು ರವರ ಮನೆಯ ಹತ್ತಿರ ಬಂದು ನೋಡಿದಾಗ, ಮನೆಯ ಒಳಗೆ ಅಶ್ವಿನಿಯು ಕೊಲೆಯಾಗಿ ಬಿದ್ದಿದ್ದಳು ಹಾಗೂ ಸ್ಥಳದಲ್ಲಿ ರಕ್ತ ಬಿದ್ದಿತ್ತು. ಆ ನಂತರ ನಾನು

ವೇಲು ಹಾಗೂ ಆತನ ಮಗನ ಶವ ಬಿದ್ದ ಸ್ಥಳಕ್ಕೆ ಹೋಗಿ ನೋಡಿದ್ದು, ಅಲ್ಲಿ ಮೊದಲು ಸತ್ಯ ನಾರಾಯಣ ಮೂರ್ತಿಯ ಶವವನ್ನು ನೋಡಿರುತ್ತೇನೆ, ಅಲ್ಲಿಂದ ಸ್ವಲ್ಪ ದೂರದಲ್ಲಿ ವೇಲು ರವರ ಶವವನ್ನು ನೋಡಿರುತ್ತೇನೆ. ಅವರಿಬ್ಬರನ್ನೂ ಕತ್ತಿಯಿಂದ ಕಡಿದು ಕೊಲೆ ಮಾಡಲಾಗಿತ್ತು ಹಾಗೂ ಸ್ಥಳದಲ್ಲಿ ರಕ್ತ ಬಿದ್ದಿತ್ತು.

3. ಆ ನಂತರ ಪೊಲೀಸರು ನನ್ನನ್ನು ಗೋವಾದ ಬಾಂಬೋಲಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಅಲ್ಲಿ ಆಸ್ಪತ್ರೆಯಲ್ಲಿ ಜಾನಕಿಯನ್ನು ದಾಖಲಿಸಿದ್ದು, ಆಕೆಯ ತಲೆಗೆ ಬ್ಯಾಂಡೇಜ್ ಹಾಕಿದ್ದರು, ಎಡಗೈ ತುಂಡಾಗಿತ್ತು ಹಾಗೂ ಬ್ಯಾಂಡೇಜ್ ಮಾಡಿದ್ದರು. ನಂತರ ಪೊಲೀಸರು ಆಸ್ಪತ್ರೆಯ ವೈದ್ಯರ ಬಳಿ ಜಾನಕಿಯ ಬಳಿ ಮಾತನಾಡಬಹುದಾ ಎಂದು ಕೇಳಿದ್ದು, ಅದಕ್ಕೆ ವೈದ್ಯರು ಮಾತನಾಡಬಹುದು ಎಂದು ತಿಳಿಸಿರುತ್ತಾರೆ. ಆ ನಂತರ ಪೊಲೀಸರು ಮತ್ತು ನಾನು ಜಾನಕಿಯ ಬಳಿ ಏನಾಯಿತು ಎಂದು ಕೇಳಿದ್ದು, ಆಗ ಜಾನಕಿ ನಮ್ಮ ಬಳಿ ಕನ್ನಡ ಹಾಗೂ ತಮಿಳು ಭಾಷೆಯಲ್ಲಿ, "ನಿನ್ನೆ ದಿನ ಸಂಜೆ ವೇಲು ಮತ್ತು ಮಕ್ಕಳಿಬ್ಬರೂ ದೇವಸ್ಥಾನಕ್ಕೆ ಹೋಗಿ, ಮನೆಗೆ ವಾಪಸು ಬಂದು, ಊಟ ಮಾಡಿ, ಟಿ.ವಿ ನೋಡುತ್ತಿದ್ದಾಗ, ಗಿರಿಯು ವೇಲುಗೆ ಕರೆ ಮಾಡಿ, ಸ್ವಲ್ಪ ಮನೆಯಿಂದ ಹೊರಗೆ ಬಾ, ನಾನು ನಿನ್ನ ಜೊತೆ ಮಾತನಾಡಬೇಕು ಎಂದು ಕರೆದಿದ್ದು, ಆ ನಂತರ ವೇಲು ಹಾಗೂ ಸತ್ಯ ನಾರಾಯಣ ಮೂರ್ತಿ ಮನೆಯಿಂದ ಹೊರಗೆ ಹೋಗಿ ಆರೋಪಿಯೊಂದಿಗೆ ಮಾತನಾಡುತ್ತಿದ್ದರು, ನಾನು ಮತ್ತು ನನ್ನ ಮಗಳು ಮನೆಯಲ್ಲಿದ್ದೆವು, ಮನೆಯ ಹೊರಗೆ ವಿದ್ಯುತ್ ಬೆಳಕು ಇತ್ತು, ವೇಲು ಹಾಗೂ ಆರೋಪಿ ಮಾತನಾಡುತ್ತಿದ್ದನು ನಾನು ನೋಡಿರುತ್ತೇನೆ ಹಾಗೂ ಅವರಿಬ್ಬರೂ ಮಾತನಾಡಿಕೊಂಡು ಬರುತ್ತಾರೆ ಎಂದು ತಿಳಿದು, ಮನೆಯ ಬಾಗಿಲನ್ನು ಹಾಕಿಕೊಂಡೆವು. ನಂತರ ಸ್ವಲ್ಪ ಸಮಯದಲ್ಲಿ ಕರೆಂಟ್ ಹೋಯಿತು ಹಾಗೂ ಯಾರೋ ಮನೆಯ ಬಾಗಿಲನ್ನು ತಟ್ಟಿದಂತಾಗಿ, ನಾನು ಚಿಮಣಿ ದೀಪವನ್ನು ಹಿಡಿದು, ಬಾಗಿಲನ್ನು ತೆರೆದು ನೋಡಿದಾಗ, ಗಿರಿ ಮನೆಯ ಒಳಗೆ ಬಂದು, ಅಶ್ವಿನಿಯನ್ನು ಸ್ವಲ್ಪ ಕಳುಹಿಸಿಕೊಡು ಎಂದು ಕೇಳಿದ, ಆಗ ನಾನು ಮಲಗಿಸಬೇಕು, ಕಳುಹಿಸುವುದಿಲ್ಲ ಎಂದು ಹೇಳಿದ್ದು, ಆಗ ಗಿರಿ ಕತ್ತಿಯಿಂದ ನನಗೆ ಹೊಡೆಯಲು ಬಂದಿದ್ದು, ನಾನು ನನ್ನ ಕೈಯನ್ನು ಅಡ್ಡ ಮಾಡಿದಾಗ, ಕತ್ತಿಯಿಂದ ನನ್ನ ಕೈ ತುಂಡಾಗಿರುತ್ತದೆ ಹಾಗೂ ನನ್ನ ತಲೆಗೆ ಬಿದ್ದು, ಗಾಯವಾಗಿರುತ್ತದೆ, ಆ ನಂತರ ಅವನು ತನ್ನ ಕೈಯಲ್ಲಿದ್ದ ಕತ್ತಿಯಿಂದ ಅಶ್ವಿನಿಯ ಕುತ್ತಿಗೆ ಬಳಿ ಕಡಿದಿರುತ್ತಾನೆ, ಅದನ್ನು ನೋಡಿದ ನಾನು ಪ್ರಜ್ಞೆ ತಪ್ಪಿ ಬಿದ್ದಿರುತ್ತೇನೆ, ಆ ನಂತರ ಎಚ್ಚರವಾಗಿ ಅಶ್ವಿನಿ ಕೊಲೆಯಾಗಿ ಬಿದ್ದಿದ್ದನ್ನು ನೋಡಿ, ನಾನು ಮನೆಯ ಹೊರಗೆ ಹೋದೆ"

ಎಂದು ಹೇಳಿದ್ದು, ಆಕೆ ಕನ್ನಡ ಹಾಗೂ ತಮಿಳನಲ್ಲಿ ಹೇಳಿದ್ದ ವಿಷಯವನ್ನು ನಾನು ಪೊಲೀಸರಿಗೆ ಕನ್ನಡದಲ್ಲಿ ಹೇಳಿರುತ್ತೇನೆ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

4. ದಿಃ 18-02-2014 ರಂದು ಕದ್ರಾ ಪೊಲೀಸರು ನನ್ನನ್ನು ಹಾಗೂ ನನ್ನ ಅಳಿಯ ಚಾಸಾ-10 ರವರನ್ನು ಪಂಚನಾಮೆಗಾಗಿ ಪೊಲೀಸ್ ಠಾಣೆಗೆ ಕರೆಸಿದ್ದರು. ನಾವು ಅಲ್ಲಿಗೆ ಹೋದಾಗ ಆರೋಪಿ ಠಾಣೆಯಲ್ಲಿದ್ದನು. ಅಲ್ಲಿ ಆರೋಪಿಯು ನಮ್ಮ ಸಮಕ್ಷಮ ತಾನು ಕೃತ್ಯಕ್ಕೆ ಬಳಸಿದ ಕತ್ತಿಯನ್ನು ತೋರಿಸುವುದಾಗಿ ಹೇಳಿರುತ್ತಾನೆ. ಆ ನಂತರ ನಾವೇಲ್ಲರೂ ಪೊಲೀಸ್ ಜೀಪ್ ನಲ್ಲಿ ಹೋಗಿದ್ದು, ಆರೋಪಿ ನಮ್ಮನ್ನು ಆತನ ಮನೆಗೆ ಕರೆದುಕೊಂಡು ಹೋಗಿರುತ್ತಾನೆ. ನಾವು ಹೋದ ಜೀಪ್ ಆರೋಪಿಯ ಮನೆಯ ಹತ್ತಿರ ತಲುಪಿದಾಗ, ಆರೋಪಿ ಜೀಪ್ ನ್ನು ನಿಲ್ಲಿಸಲು ಹೇಳಿ, ಆತ ಜೀಪ್ ನಿಂದ ಮೊದಲು ಇಳಿದು, ನಮ್ಮನ್ನು ಆತನ ಮನೆಯ ಒಳಗೆ ಕರೆದುಕೊಂಡ ಹೋದನು, ಆ ನಂತರ ಮನೆಯ ಹಿಂದೆ ಇದ್ದ, ಕಟ್ಟಿಗೆಗಳನ್ನು ಶೇಖರಣೆ ಮಾಡುವ ಶೆಡ್ ಗೆ ಕರೆದುಕೊಂಡು ಹೋಗಿ, ಅಲ್ಲಿ ಕೆಳಗೆ ಕುಳಿತುಕೊಂಡು, ತಾನು ಇಟ್ಟಿದ್ದ, ಕತ್ತಿಯನ್ನು ತೆಗೆದು, ಪೊಲೀಸರಿಗೆ ನೀಡಿ, ತಾನು ಇದೇ ಕತ್ತಿಯಿಂದ ವೇಲು, ಆತನ ಮಕ್ಕಳನ್ನು ಮತ್ತು ಹೆಂಡತಿಯನ್ನು ಕೊಲೆ ಮಾಡಲು ಬಳಸಿದ ಕತ್ತಿ ಎಂದು ಹೇಳಿರುತ್ತಾನೆ ಹಾಗೂ ಆ ಕತ್ತಿಗೆ ರಕ್ತ ತಾಗಿತ್ತು. ಪೊಲೀಸರು ಸದರಿ ಕತ್ತಿಯನ್ನು ಬಟ್ಟೆಯಲ್ಲಿ ಸುತ್ತಿ ಜಪ್ತುಪಡಿಸಿಕೊಂಡು, ಅದರ ಮೇಲೆ ನನ್ನ ಸಹಿಯನ್ನು ಪಡೆದುಕೊಂಡರು. (ಈ ಸಮಯದಲ್ಲಿ ಆರೋಪಿ ಪರ ವಕೀಲರು ಸಾಕ್ಷಿದಾರನು "ಇದೇ ಕತ್ತಿಯಿಂದ ವೇಲು, ಆತನ ಮಕ್ಕಳನ್ನು ಮತ್ತು ಹೆಂಡತಿಯನ್ನು ಕೊಲೆ ಮಾಡಲು ಬಳಸಿದ ಕತ್ತಿ" ಎಂದು ಹೇಳಿರುತ್ತಾನೆ ಎಂದು ಹೇಳಿದ ವಿಷಯವನ್ನು ದಾಖಲಿಸಿಕೊಳ್ಳಲು ತಕರಾರು ಮಾಡಿದ್ದು, ಸದರಿ ತಕರಾರನ್ನು ತಳ್ಳಿ ಹಾಕಲಾಯಿತು) ಅದಲ್ಲದೇ ಸದರಿ ಶೆಡ್ ನಲ್ಲಿ ಹಗ್ಗದ ಮೇಲೆ ಒಣಗಲು ಹಾಕಿದ್ದ ಅರ್ದ ತೋಳಿನ ಕಪ್ಪು ಬಣ್ಣದ ಒಂದು ಟೀ ಶರ್ಟ್, ಒಂದು ನೀಲಿ ಬಣ್ಣದ ಚಡ್ಡಿಯನ್ನು ತೆಗೆದು, ಪೊಲೀಸರಿಗೆ ನೀಡಿ, ತಾನು ಕೊಲೆ ಮಾಡುವ ಸಮಯದಲ್ಲಿ ಧರಿಸಿದ್ದ ಬಟ್ಟೆಗಳೆಂದು ಹೇಳಿದ್ದು, ಪೊಲೀಸರು ಸದರಿ ಬಟ್ಟೆಗಳನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡು, ಅದರ ಮೇಲೆ ನಮ್ಮ ಸಹಿ ಪಡೆದುಕೊಂಡರು, ಸದರಿ ಬಟ್ಟೆಗಳ ಮೇಲೆ ರಕ್ತದ ಕಲೆಗಳಿದ್ದವು. ಆ ನಂತರ ಆರೋಪಿ ನಮ್ಮನ್ನು ಆತನ ಮನೆಯ ಒಳಗೆ ಕರೆದುಕೊಂಡು ಹೋಗಿ, ಟಿ.ವಿ ಯ ಸ್ಟ್ಯಾಂಡ್ ಮೇಲೆ ಇದ್ದ ಒಂದು ಸ್ಯಾಮಸಂಗ್ ಮೊಬೈಲ್ ನ್ನು ನೀಡಿ, ತಾನು ಉಪಯೋಗಿಸುತ್ತಿದ್ದ ಮೊಬೈಲ್ ಎಂದು ಹೇಳಿ ತೋರಿಸಿದ್ದು, ಪೊಲೀಸರು ಅದನ್ನು ನಮ್ಮ ಸಮಕ್ಷಮ ಜಪ್ತುಪಡಿಸಿಕೊಂಡರು ಹಾಗೂ ನಮ್ಮ ಸಹಿಯನ್ನು ಪಡೆದುಕೊಂಡರು.

5. ಆ ನಂತರ ಆರೋಪಿ ತಾನು ಕೊಲೆ ಮಾಡಿದ ಸ್ಥಳವನ್ನು ತೋರಿಸುತ್ತೇನೆ ಎಂದು ಹೇಳಿ, ನಮ್ಮನ್ನು ಕೊಡಸಳ್ಳಿಗೆ ಹೋಗುವ ಅರಣ್ಯ ರಸ್ತೆಗೆ ಕರೆದುಕೊಂಡು ಹೋಗಿ, ಅಲ್ಲಿ ಜೀಪ್ ನ್ನು ನಿಲ್ಲಿಸಿ, ಇಳಿದು, ಸ್ವಲ್ಪ ದೂರ ನಡೆದುಕೊಂಡು ಹೋಗಿ, ಇದೇ ಸ್ಥಳದಲ್ಲಿ ನಾನು ಸತ್ಯ ನಾರಾಯಣ ಮೂರ್ತಿಗೆ ಹೊಡೆದು ಕೊಲೆ ಮಾಡಿರುತ್ತೇನೆ ಎಂದು ಹೇಳಿ, ಸ್ಥಳ ಎಂದು ತೋರಿಸಿದ್ದು, ಸ್ಥಳದಲ್ಲಿ ರಕ್ತದ ಕಲೆಗಳ ಗುರುತುಗಳು ಕಂಡುಬಂದಿರುತ್ತದೆ. ಅಲ್ಲಿಂದ ಸ್ವಲ್ಪ ದೂರದಲ್ಲಿ ತಾನು ಇದೇ ಜಾಗದಲ್ಲಿ ವೇಲುಗೆ ಕತ್ತಿಯಿಂದ ಹೊಡೆದು, ಕೊಲೆ ಮಾಡಿದ ಸ್ಥಳ ಎಂದು ತೋರಿಸಿದ್ದು, ಸದರಿ ಸ್ಥಳದಲ್ಲಿಯೂ ಸಹ ರಕ್ತದ ಕಲೆಗಳ ಗುರುತುಗಳು ಕಂಡುಬಂದಿರುತ್ತದೆ. ಅದೇ ಸ್ಥಳದಲ್ಲಿ ಆರೋಪಿಯು ಒಂದು ಮರದ ಬುಡಚಿಯ ಕೆಳಗೆ ಜಾಗವನ್ನು ತೋರಿಸಿ, ಕೊಲೆ ಮಾಡುವ ಮೊದಲು ನಾನು ಇದೇ ಜಾಗದಲ್ಲಿ ಕತ್ತಿಯನ್ನು ಬಚ್ಚಿಟ್ಟ ಸ್ಥಳ ಎಂದು ತೋರಿಸಿರುತ್ತಾನೆ.

6. ಆ ನಂತರ ಆರೋಪಿ ನಮ್ಮನ್ನು ವೇಲುವಿನ ಮನೆಯ ಹತ್ತಿರ ಕರೆದುಕೊಂಡು ಹೋಗಿ, ತಾನು ಅಶ್ವಿನಿಯನ್ನು ಕೊಲೆ ಮಾಡಿದ ಸ್ಥಳ ಹಾಗೂ ಜಾನಕಿಗೆ ಕತ್ತಿಯಿಂದ ಹೊಡೆದ ಸ್ಥಳ ಎಂದು ತೋರಿಸಿರುತ್ತಾನೆ. ಸದರಿ ಸ್ಥಳದಲ್ಲಿ ರಕ್ತ ಬಿದ್ದಿತ್ತು. ಆ ದಿನ ನಾವು ಬೆಳಿಗ್ಗೆ 10–00 ಗಂಟೆಗೆ ಠಾಣೆಯಿಂದ ಹೊರಟು ಮೇಲೆ ಹೇಳಿದ ಸ್ಥಳಗಳಲ್ಲಿ ಪಂಚನಾಮೆಯನ್ನು ಮಾಡಿ, 11–30 ಗಂಟೆಗೆ ಪಂಚನಾಮೆಯನ್ನು ಮುಗಿಸಿರುತ್ತಾರೆ. ಸದರಿ ಪಂಚನಾಮೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ–24 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–24(ಬಿ) ಎಂದು ಗುರುತಿಸಲಾಯಿತು. ಪಂಚನಾಮೆಯ ಸಮಯದಲ್ಲಿ ತೆಗೆಯಲಾದ ನಿಪಿ–25 ರಿಂದ 35 ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು–26 ಕತ್ತಿಯನ್ನು, ಮುದ್ದೆ ಮಾಲು–27 ಟೀ ಶರ್ಟ್ ನ್ನು, ಮುದ್ದೆ ಮಾಲು–28 ಚಡ್ಡಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳ ಮೇಲೆ ಇರುವ ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು–26(ಬಿ) ರಿಂದ 28(ಬಿ) ಎಂದು ಗುರುತಿಸಲಾಯಿತು. ಅದೇ ರೀತಿ ಸಾಕ್ಷಿಯು ಮುದ್ದೆ ಮಾಲು–29 ಮೊಬೈಲ್ ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎ.ಎ.ಎ ವಕೀಲರಿಂದ**

7. ದಿಃ 18-02-2014 ರಂದು ಕದ್ರಾ ಪೊಲೀಸ್ ಠಾಣೆಗೆ ನಾನು ಒಂದು ಬಾರಿ ಹೋಗಿರುತ್ತೇನೆ. ನಾನು ಠಾಣೆಗೆ ಹೋದಾಗ ಆರೋಪಿಯನ್ನು ನನ್ನ ಮುಂದೆ ಕರೆದುಕೊಂಡು ಬಂದಿರುತ್ತಾರೆ, ಆದರೆ ಆತ ಯಾವ ಕೋಣೆಯಲ್ಲಿದ್ದ ಹಾಗೂ ಎಷ್ಟು ಸಮಯದ ವರೆಗೆ ಇದ್ದ ಎಂದು ನನಗೆ ಗೊತ್ತಿಲ್ಲ. ಮೊದಲಿನಿಂದಲೂ ನನಗೆ ಆರೋಪಿಯ ಪರಿಚಯ ಇರುತ್ತದೆ. ಆರೋಪಿ ಕ್ರಿಶ್ಚಿಯನ್ ಸಮುದಾಯದವನು. ಆರೋಪಿಯ ಹೆಸರು ಗುಸ್ತೀನ್ ಗ್ರೇಗರಿ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ನಾವು ಆತನನ್ನು ಮೊದಲಿನಿಂದಲೂ ಗಿರಿ ಎಂದು ಕರೆಯುತ್ತೇವೆ. ಆರೋಪಿಯ ಮನೆ ಪೊಲೀಸ್ ಠಾಣೆಯಿಂದ ಸಮೀಪದಲ್ಲಿರುತ್ತದೆ ಎಂದರೆ ಸರಿ. ಆರೋಪಿಯ ಮನೆಗೆ ಕಂಪೌಂಡ ಇರುವುದಿಲ್ಲ, ಆತನ ಮನೆಯ ಅಕ್ಕ-ಪಕ್ಕದಲ್ಲಿ ಸುಮಾರು ಮನೆಗಳು ಇರುತ್ತವೆ, ಆದರೆ ಎಷ್ಟು ಮನೆಗಳು ಇರುತ್ತವೆ ಎಂದು ನಾನು ಲೆಕ್ಕ ಮಾಡಿಲ್ಲ. ಆತನ ಮನೆಯಲ್ಲಿ ತಂದೆ-ತಾಯಿ, ಅಣ್ಣ-ತಂಗಿ ಇರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

8. ನಾನು ಠಾಣೆಗೆ ಹೋದಾಗ ಆರೋಪಿಯನ್ನು ಕರೆದುಕೊಂಡು ಬಂದಾಗ, ಆತನಿಗೆ ಪೇಸ್ ಮಾಸ್ಕ ಹಾಕಲಾಗಿತ್ತು ಹಾಗೂ ಕೈಗೆ ಬೇಡಿ ತೋಡಿಸಲಾಗಿತ್ತು ಎಂದರೆ ಸರಿ. ಆತನೊಂದಿಗೆ ಬಳಹಷ್ಟು ಜನ ಪೊಲೀಸರು ಇದ್ದರು ಎಂದರೆ ಸರಿ. ಆರೋಪಿಯನ್ನು ದಸ್ತಗಿರಿ ಮಾಡಿರುವ ವಿಚಾರ, ನಾನು ಪಂಚನಾಮೆಗೆ ಹೋದಾಗ ತಿಳಿಯಿತು. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿ. ನಾವು ಜೀಪ್ ನಲ್ಲಿ ಹೋದ ಸದರಿ ಜೀಪ್ ನ ನಂಬರ್ ನನಗೆ ಗೊತ್ತಿಲ್ಲ. ಸದರಿ ಜೀಪ್ ನಲ್ಲಿ ಎಷ್ಟು ಮಂದಿ ಹೋಗಿದ್ದೆವು ಹಾಗೂ ನಾವು ಎಲ್ಲಿ ಕುಳಿತಿದ್ದೆವು ಎಂದು ನನಗೆ ಹೇಳಲು ಬರುವುದಿಲ್ಲ. ಪೊಲೀಸ್ ಜೀಪ್ ನ್ನು 2 ಬಾರಿ ನಿಲ್ಲಿಸಿರುತ್ತಾರೆ. ಮೊದಲ ಬಾರಿಗೆ ಜೀಪ್ ನಿಲ್ಲಿಸಿದಾಗ 150 ಮೀಟರ್ ಆಗಿರುತ್ತದೆ. ಪಂಚನಾಮೆಯ ಕಾಲದಲ್ಲಿ ಪೊಲೀಸರು ಮತ್ತು ಆರೋಪಿ ನಡುವೆ ಯಾವುದೇ ಮಾತುಕತೆಯಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಇಡೀ ಪಂಚನಾಮೆಯ ಸಮಯದಲ್ಲಿ ಆರೋಪಿಯ ಮುಖಕ್ಕೆ ಪೇಸ್ ಮಾಸ್ಕ ಹಾಕಲಾಗಿತ್ತು ಹಾಗೂ ಕೈಗೆ ಬೇಡಿ ತೋಡಿಸಲಾಗಿತ್ತು ಎಂದರೆ ಸರಿ. ಪಂಚನಾಮೆಯ ಕಾಲದಲ್ಲಿ ಎಲ್ಲಾ ಸ್ಥಳಗಳಿಗೆ ಪೊಲೀಸರೇ ಆರೋಪಿಯನ್ನು ಕರೆದುಕೊಂಡು ಹೋಗುತ್ತಿದ್ದರು ಎಂದರೆ ಸರಿ.

9. ನಿಪಿ-27 ಪೋಟೋದಲ್ಲಿ ಕಾರ್ಪೆಟ್, ಬಕೇಟ್ ಮತ್ತು ಚಾಪೆ ಕಾಣುತ್ತವೆ ಎಂದರೆ ಸರಿ. ನಿಪಿ-28 ರಿಂದ 30 ಪೋಟೋಗಳಲ್ಲಿ ಸೈಕಲ್, ಏಣಿ, ಒಂದು ಕೈ ಚೀಲ ಕಾಣುತ್ತವೆ ಎಂದರೆ ಸರಿ. ನಿಪಿ-32 ಪೋಟೋದಲ್ಲಿ ಒಂದು ಬಿಳಿ ಬಟ್ಟೆ, ಒಂದು ನೇರಳೆ ಬಣ್ಣದ ಬಟ್ಟೆ, ಒಂದು

ಪ್ಲಾಸ್ಟಿಕ್ ಚೀಲ ಕಾಣುತ್ತವೆ ಎಂದರೆ ಸರಿ. ನಿಪಿ–33 ಫೋಟೋದಲ್ಲಿ ಒಂದು ಬಕೇಟ್ ಮತ್ತು ಸ್ಟೀಲ್ ಪಾತ್ರೆಗಳು ಕಾಣುತ್ತವೆ ಎಂದರೆ ಸರಿ. ನಿಪಿ–27 ರಿಂದ 33 ರಲ್ಲಿ ಕಾಣುತ್ತಿರುವ ವಸ್ತುಗಳನ್ನು ಸದರಿ ಮನೆಯವರು ದಿನನಿತ್ಯ ಬಳಸುವ ವಸ್ತುಗಳು ಎಂದರೆ ಸರಿ. ನಿಪಿ–26 ರಲ್ಲಿ ಕಾಣುತ್ತಿರುವ ಮನೆಯ ನಂಬರ್ ನನಗೆ ಗೊತ್ತಿಲ್ಲ, ಮನೆಯ ನಂಬರ್ ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಸಾಕ್ಷಿಯು ಪಂಚನಾಮೆಯಲ್ಲಿ ನೋಡಿಲ್ಲ ಎಂದು ನುಡಿಯುತ್ತಾರೆ. ನಿಪಿ–33 ರ ಫೋಟೊದಲ್ಲಿ ಕಾಣುತ್ತಿರುವ ಮನೆಯ ನಂಬರ್ ನನಗೆ ಗೊತ್ತಿಲ್ಲ. ಮನೆಯ ನಂಬರ್ ಗಳನ್ನು ಪಂಚನಾಮೆಯಲ್ಲಿ ನಮೂದಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು–ಬರೆಯಲು ಬರುವುದಿಲ್ಲ. ಪಂಚನಾಮೆಯಲ್ಲಿ ಏನೇನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಠಾಣೆಯಲ್ಲಿ ಬರವಣಿಗೆ ಮಾಡಲು ಪ್ರತ್ಯೇಕ ಕೋಣೆ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಂಚನಾಮೆಯನ್ನು ಯಾರು ಬರೆದರು ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಪೊಲೀಸರು ಬರೆದಿರುತ್ತಾರೆ ಎಂದು ನುಡಿಯುತ್ತಾರೆ.

10. ಠಾಣೆಯಿಂದ ಹೊರಡುವ ಮೊದಲು ಪೊಲೀಸರು ನನ್ನಿಂದ ಯಾವುದೇ ಸಹಿಯನ್ನು ಪಡೆದುಕೊಂಡಿಲ್ಲ. ಪುನಃ ಠಾಣೆಗೆ ಬಂದಾಗ ಪೊಲೀಸರು ನನ್ನಿಂದ 3 ಸಹಿಗಳನ್ನು ಪಡೆದುಕೊಂಡರು. ನಾನು ಸಹಿ ಮಾಡಿದ 3 ದಾಖಲೆಗಳನ್ನು ಯಾರು ಮತ್ತು ಎಲ್ಲಿ ತಯಾರು ಮಾಡಿದರು ಎಂದು ನನಗೆ ಗೊತ್ತಿಲ್ಲ. ಮುದ್ದೆ ಮಾಲು–27 ಮತ್ತು 28 ಬಟ್ಟೆಗಳು ಯಾವ ಕಂಪನಿಯವು ಹಾಗೂ ಅದರ ಮೇಲೆ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಮುದ್ದೆ ಮಾಲು–26 ಕತ್ತಿಯ ತುದಿ ಬೆಂಡಾಗಿರುವುದಿಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲು–26 ರಿಂದ 28 ಗಳು ಸಾಮಾನ್ಯವಾಗಿ ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಆರೋಪಿ ನಮ್ಮನ್ನು ಹಾಗೂ ಪೊಲೀಸರನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಹಾಗೂ ಯಾವುದೇ ಮುದ್ದೆ ಮಾಲುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ–24 ಪಂಚನಾಮೆಯನ್ನು, ನಿಪಿ–27 ರಿಂದ 33 ಫೋಟೋಗಳನ್ನು ಹಾಗೂ ಮುದ್ದೆ ಮಾಲು–26 ರಿಂದ 28 ನ್ನು ಪೊಲೀಸರು ಈ ಪ್ರಕರಣದ ಅನುಕೂಲಕ್ಕಾಗಿ ಠಾಣೆಯಲ್ಲಿಯೇ ಸೃಷ್ಟಿಸಿರುತ್ತಾರೆ ಎಂದರೆ ಸರಿಯಲ್ಲ. ಪೊಲೀಸರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

11. ಗೋವಾದ ಬಾಂಬೊಲಿ ಆಸ್ಪತ್ರೆಗೆ ನಾನು, ನನ್ನ ಹೆಂಡತಿ ಹಾಗೂ ಇತರೇ 3 ಜನ ಪೊಲೀಸರು, ಒಟ್ಟು 5 ಜನ ಇಂಡಿಕಾ ಕಾರ್ ನಲ್ಲಿ ಹೋಗಿದ್ದೆವು. ಕೊಲೆಯಾದ ಮರುದಿನವೇ ನಾವು ಬಾಂಬೊಲಿ ಆಸ್ಪತ್ರೆಗೆ ಹೋಗಿರುತ್ತೇವೆ. ಗೋವಾದ ಬಾಂಬೊಲಿ ಆಸ್ಪತ್ರೆ ಕಧ್ರಾದಿಂದ ಎಷ್ಟು ದೂರ ಆಗುತ್ತದೆ ಎಂದು ನನಗೆ ಹೇಳಲು ಬರುವುದಿಲ್ಲ. ನನಗೆ ಕನ್ನಡ ಮತ್ತು ತಮಿಳ ಭಾಷೆ ಬರುತ್ತದೆ ಎಂದು ಪೊಲೀಸರಿಗೆ ದಾಖಲೆಯನ್ನು ನೀಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ಕನ್ನಡ ಮತ್ತು ತಮಿಳ ಭಾಷೆ ಬರುತ್ತದೆ ಎಂದು ನುಡಿಯುತ್ತಾರೆ. ನಾನು ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ ಶ್ರೀ ಗೋವಿಂದರಾಜ ಟಿ ದಾಸರೆ ಜೊತೆ ಮಾತ್ರ ಹೋಗಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಪೊಲೀಸರ ಮುಂದೆ ನೀಡಿದ ಹೇಳಿಕೆಯಲ್ಲಿ 5 ಜನ ಹೋಗಿದ್ದೆವು ಎಂದು ಹೇಳಿಲ್ಲ ಎಂದರೆ ಸರಿ. ಹೇಳಲು ತೊಂದರೆ ಇರಲಿಲ್ಲ ಎಂದರೆ ಸರಿ. ಹೇಳಿಕೆಯಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಈ ದಿನ ನ್ಯಾಯಾಲಯಕ್ಕೆ ಪೊಲೀಸರೊಂದಿಗೆ ಬಂದಿರುತ್ತೇನೆ ಎಂದರೆ ಸಾಕ್ಷಿಯು ನಾನು ಬೈಕ್ ನಲ್ಲಿ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಬೆಳಿಗ್ಗೆ ಪೊಲೀಸರನ್ನು ಭೇಟಿ ಮಾಡಿ, ಅರ್ದ ಗಂಟೆ ಅವರೊಂದಿಗೆ ಇದ್ದೆನು ಎಂದರೆ ಸರಿ. ಪೊಲೀಸರು ಇದೇ ರೀತಿ ಸಾಕ್ಷ್ಯ ನುಡಿಯಬೇಕೆಂದು ಹೇಳಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

12. ಬಾಂಬೊಲಿ ಆಸ್ಪತ್ರೆಯಲ್ಲಿ ಬೇರೆ ಬೇರೆ ವಿಭಾಗಗಳು ಇರುತ್ತವೆ ಎಂದರೆ ನನಗೆ ಗೊತ್ತಿಲ್ಲ. ಜಾನಕಿ ಯಾವ ವಿಭಾಗದಲ್ಲಿ ದಾಖಲಾಗಿದ್ದಳು ಎಂದು ನನಗೆ ಹೇಳಲು ಬರುವುದಿಲ್ಲ, ಆದರೆ ಅವಳು ಸದರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಳು. ನಾವು ಆಸ್ಪತ್ರೆಗೆ ಹೋದಾಗ ವೈದ್ಯರು ಆಕೆಗೆ ಚಿಕಿತ್ಸೆ ನೀಡುತ್ತಿದ್ದರು ಹಾಗೂ ಉಪಚರಿಸುತ್ತಿದ್ದರು. ಅಲ್ಲಿ ಎಷ್ಟು ವೈದ್ಯರು ಇದ್ದರು ಎಂದು ನನಗೆ ಹೇಳಲು ಬರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಜಾನಕಿ ತಮಿಳು ಭಾಷೆಯಲ್ಲಿ ಹೇಳಿದ ಪದಗಳನ್ನು ಹೇಳಿಲ್ಲ ಎಂದರೆ ಸರಿ. ನಾವು ಆಸ್ಪತ್ರೆಯಲ್ಲಿ ಜಾನಕಿಯನ್ನು ನೋಡಿದಾಗ ಆಕೆ ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ ಹಾಗೂ ಆಕೆ ಯಾವುದೇ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ.ಬಾಂಬೊಲಿ ಆಸ್ಪತ್ರೆಗೆ ನಾವು ಎಂದಿಗೂ ಹೋಗಿಲ್ಲ ಎಂದರೆ ಸರಿಯಲ್ಲ. ವೇಲು ನನ್ನ ಸಂಬಂಧಿಕನಾದ ಕಾರಣ, ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ